ರಾತ್ರಿಯ ಪ್ರಿಯ ಸಖಿಯೆ, ಹೇ ಸ್ವಪ್ನ ಕಾಮಿನಿಯೆ, ಲಲನೆಯ ಆತ್ಮದಲ್ಲಿ ಯಾವ ಮನೋಹರ ಸ್ವರ್ಗವನ್ನು ಕಟ್ಟುತ್ತಿರುವೆ ತೋರಿಸು.

ದಟ್ಟವಾದ ನಿಶ್ಶಬ್ದವಾದ ಕಾಡಿನ ಒಳಗಡೆ ನಡುಹಗಲ ಮಾರ್ತಾಂಡ ಸೂರ್ಯನ ತೀಕ್ಷ್ಣ ಪ್ರಭಾವವನ್ನು ತಂಪು ಬನಗತ್ತಲೆ ಅಡಗಿಸಿತ್ತು. ಅದು ಭಯಂಕರವಾದ ಸಮ್ಮೋಹನದಿಂದ ಮೆರೆಯುತ್ತ ಚಿತ್ರದಂತೆ ನಿಶ್ಚಲವಾಗಿತ್ತು. ಆ ಬನಗತ್ತಲೆಯಲ್ಲಿ ವೃಕ್ಷ ಕುಲ ಕೀರ್ತಿಯಾಗಿ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಮರಗಳು ಸ್ವಚ್ಛಂದವಾಗಿ ಬೆಳೆದಿದ್ದವು. ಅವು ಬಲದಿಂದ ಉನ್ಮತ್ತವಾದ ದೈತ್ಯ ಬಾಹುಗಳಂತೆ ಸುತ್ತಲೂ ಅಂಜಿಕೆಯನ್ನುಂಟು ಮಾಡುವ ದಾರುಣವಾದ ಕುಟಿಲ ಜಟಿಲ ವಿನ್ಯಾಸದಿಂದ ಕೂಡಿದ ತಮ್ಮ ಮಹಾಶಾಖೆಗಳನ್ನು ಬೀಸಿದ್ದವು.

ಅಲ್ಲಿ ಬಳ್ಳಿದಿಂಡುಗಳು ಜೋಲಾಡುವ ಹೆಬ್ಬಾವುಗಳಂತೆ ದೀರ್ಘ ವಕ್ರಾಕಾರದಲ್ಲಿ ಜೋಲಾಡುತ್ತಿದ್ದವು. ದಿನಮಣಿಯ ಬೆದರಿಕೆಗೆ ಕಾಡನ್ನೇ ಮರೆಯಾಗಿಸಿಕೊಂಡ ಕತ್ತಲೆಯ ಕುಲದಂತೆ, ನೆರಳ ವಿರೂಪಗಳು ಕೂಡಿಕೊಂಡು ಅಲ್ಲಲ್ಲಿ ಅವಿತುಕೊಂಡಿದ್ದವು.

ಚಿಮ್ಮಿದುದು ಜಿಂಕೆಮರಿಯೊಂದು – ಕರಿಮುಗಿಲ್ಗಬ್ಬದಿಂದೊಗೆವ ಮರಿಮಿಂಚೆನಲ್

ಚಿತ್ರಾಂಗಿಯು ಕೈಯಲ್ಲಿ ಬಿಲ್ಲನ್ನು ಹಿಡಿದು, ಮಲ್ಲಗಚ್ಚೆಯನ್ನು ಹಾಕಿದ ಹಳದಿ ವಸ್ತ್ರವನ್ನುಟ್ಟು ತಾನೇ ಕಾಡಿನ ರಾಣಿ ಎನ್ನುವಂತೆ ತಿರುಗಾಡುತ್ತಿದ್ದಳು. ಆಗ ಬನಗತ್ತಲೆಯ ಕಪ್ಪಾದ ಮುಗಿಲಿಗೆ ಕಣ್ಮಿಂಚು ಸುಳಿಸಿ ಒಂದು ಜಿಂಕೆ ಮರಿಯು ಪೊದೆಯ ಒಡಲಿನಿಂದ ಚಿಮ್ಮಿತು. ಅದು ಕರಿಮುಗಿಲ ಗರ್ಭದಿಂದ ನೆಗೆಯುವ ಮರಿಮಿಂಚಿನಂತಿದ್ದು, ತಿರುಗುವ ಕವಣೆಯಿಂದ ಸಿಡಿದು ಚಿಮ್ಮುವ ರತ್ನಶಿಲೆಯಂತಿತ್ತು.

ಕನ್ಯೆಯು ತಕ್ಷಣ ಅದರ ಬೆನ್ನಟ್ಟಿ ಹೋದಳು. ದೃಷ್ಟಿಯನ್ನೆ ಅತಿಕ್ರಮಿಸಿ ಮೀರುತ್ತ ವೇಗದಿಂದ ಓಡುತ್ತ, ನೆಲವನ್ನು ಮುಟ್ಟಿಯೂ ಮುಟ್ಟದಂತೆ ಮುಂದುವರಿಯುವ ಹರಿಣ ಶಿಶುವಿನ ಸೌಂದರ್ಯಕ್ಕೆ ಮನಸೋತಳು. ಎದೆತುಂಬಿ ಪ್ರೀತಿಸಿದ ಆ ಮುದ್ದಿನ ಮುದ್ದೆಯನ್ನು ಒಂದಿಷ್ಟೂ ನೋಯಿಸದೆ ಹಿಡಿಯುವೆ ಎನ್ನುವ ಆತುರದಲ್ಲಿ ಕನ್ಯೆಯು ಕಾಡಿನ ಮುಳ್ಳು, ಹಳ್ಳ ಕೊಳ್ಳ ಯಾವುದನ್ನೂ ಲೆಕ್ಕಿಸದೆ ಕೂಡಲೆ ಬೆಂಬತ್ತಿದಳು.

ಚೈತ್ರಮಾಸದ ಒಂದು ಬೆಳಗಿನಲ್ಲಿ ಪೂರ್ವದಿಕ್ಕಿನಲ್ಲಿ ಉದಯನದಿಯ ಬಿಳಿ ಹೊನಲು ಜಗತ್ತಿಗೆ ಹರಿಯುತ್ತಿತ್ತು. ಕಿರಣಗಳ ಜೀರ್ಕೊಳವಿಯಿಂದ ಹೊನ್ನೀರನ್ನು ಎರಚುತ್ತಿತ್ತು. ಮಲೆಯ ಹೂದೋಟದಲ್ಲಿ ತಣ್ಣನೆಯ ಗಾಳಿ ತೀಡುವುದಕ್ಕೆ ತಲೆದೂಗುತ್ತ ನಲಿದು, ತೆರೆ ತೆರೆಯಾಗಿ ನಗೆ ಬೀರಿ ಬಣ್ಣ ಬಣ್ಣದ ಕುಸುಮ ಪರಿಷತ್ತು ನೆರೆದಿತ್ತು. ಬಣ್ಣದ ಚಿಟ್ಟೆಯೊಂದು ರೆಕ್ಕೆ ಬಂದಿರುವ ಹೂವಿನಂತೆ ಪುಷ್ಪದಿಂದ ಪುಷ್ಪಕ್ಕೆ ಹಾರಿ ಮಧುವನ್ನು ಹೀರಿ ಕಂಗೊಳಿಸುತ್ತಿತ್ತು. ಓರ್ವ ಬಾಲೆಯು ಅದನ್ನು ನೋಡಿ ಮನಸೋತಳು.

ಅದನ್ನು ಹಿಡಿಯಲು ಪ್ರಯತ್ನಿಸಿದಳು. ಆ ಸುಂದರ ಪತಂಗವು ರಾಮನನ್ನು ಮೋಹಿಸಿದ ಮಾರೀಚನಂತೆ, ಒಮ್ಮೆ ಸಿಕ್ಕಿದಂತೆ ಮತ್ತೊಮ್ಮೆ ಸಿಕ್ಕದಂತೆ ಚಿಮ್ಮುತ್ತ ಅವಳನ್ನು ಪೀಡಿಸುತ್ತ ಕೊನೆಗೆ ಮಂಗಮಾಯವಾಗಿ ಹೋಯಿತು. ಆ ಬಾಲೆ ಬಯಕೆ ಕೈಗೂಡದಂತಾಗಲು ಹನಿಗಣ್ಣಾದಳು. ಕಂಬನಿಯಲ್ಲಿ ಇನ್ನೊಂದು ಹೊಂಗನಸು ಕಾಣುವಳು ಎನ್ನುವಂತೆ ನಿಟ್ಟುಸಿರುಬಿಡುತ್ತ ನಿಂತಳು.

ಅದೇ ರೀತಿ ಚಿತ್ರಾಂಗಿಯು ಕಾಂಚನ ಮೃಗಮರಿಯ ಹಿಂದೆ ಬೆನ್ನಟ್ಟಿ ಹೋದಳು. ಕಂದರವನ್ನು ಇಳಿಯುತ್ತ ಬೆಟ್ಟದ ಶಿಖರವನ್ನು ಏರಿದಳು. ಹಳ್ಳವನ್ನು ನೆಗೆದು ದಾಟಿ, ಕೊಳ್ಳ ಕೊಳ್ಳವನ್ನು ಧುಮುಕಿ, ಮುಳ್ಳು ಹೊದರಿನಲ್ಲಿ ನುಸುಳಿದಳು. ಮೈ ಬಟ್ಟೆ ಗೀರಿ ಹರಿಯಿತು. ದಟ್ಟ ಕಾಡಿನಲ್ಲಿ ನುಸಿದು ನುಗ್ಗಿ, ಬಿದಿರ ಮೆಳೆಯಲ್ಲಿ ಜುಣುಗಿದಳು. ಬಯಲಿನಲ್ಲಿ ಬೆಳೆದಿರುವ ಒಣಹುಲ್ಲಿನಲ್ಲಿ, ಕಿಬ್ಬಿಯಲ್ಲಿ, ಕೆಸರಿನಲ್ಲಿ ಹಾದು ಹೋಗುತ್ತ ಏದುಸಿರು ಬಿಟ್ಟಳು. ಆ ಜಿಂಕೆ ಮರಿಯು ಹೋದ ದಾರಿಯನ್ನೆ ಹಿಡಿದು ಛಲದಿಂದ ಧಾವಿಸಿದ ಅಂಗನೆ ತೊಳಲಿ ಬಳಲಿದಳು. ಬೇಟೆಯ ಆಯಾಸದಿಂದ ಬೆವರಿದಳು. ಚಿತ್ತದ ಉದ್ವೇಗದಿಂದ ಆ ರಾಜಕುವರಿಯು ಕನಸಿನಲ್ಲಿಯೇ ಕಾದು ಕುದಿದು ಹೋದಳು.

ಎಷ್ಟು ಬೆನ್ನಟ್ಟಿದರೇನು? ಎಷ್ಟು ಬಳಲಿದರೇನು? ಯುಕ್ತಿಯಿಂದ ಬ್ರಹ್ಮವನ್ನು ದೊರಕಿಸಿಕೊಳ್ಳಲು ಪ್ರಯತ್ನಿಸುವ ತರ್ಕದ ಬಯಕೆಯಂತೆ, ಕೊನೆಗೆ ಎಲ್ಲವೂ ವ್ಯರ್ಥವಾಯಿತು!

ರಮಣಿ ಸೋತು ನಿಂತಳು. ನಿಟ್ಟುಸಿರಿನಿಂದ ಆಕೆಯ ತುಂಬು ಎದೆಗಳು ಏಳು ಬೀಳುತ್ತಿರಲು, ದೂರಕ್ಕೆ ದೃಷ್ಟಿಹರಿಸಿ ನೋಡಿದಳು. ಜಿಂಕೆ ಮರಿಯು ಗಿರಿಯ ಕಂದರ ಸುಂದರಾಭೋಗದಲ್ಲಿ, ಹಸಿರು ಹಿನ್ನೆಲೆಯಲ್ಲಿ ಹೊನ್ನಹನಿಯಂತಿತ್ತು. ರಾಜವಂಶದ ಅಂಗನೆಯಲ್ಲವೆ, ರೋಷಗೊಂಡಳು. ಹತಾಶೆಯಿಂದ ಹುಟ್ಟಿದ ದರ್ಪದಿಂದ ಕೋಪಗೊಂಡಳು. ಬಾಣವನ್ನು ಬತ್ತಳಿಕೆಯಿಂದ ಸೆಳೆದುಕೊಂಡಳು. ಬಿಲ್ಲಿಗೆ ಹೂಡುತ್ತ, 'ನಾನು ಕೊಲ್ಲುವೆ, ಅದನ್ನು ಕೊಲ್ಲುವೆ' ಎಂದುಕೊಂಡಳು. ಗುರಿ ನೋಡಿದುದೆ ತಡ ಅದ್ಭುತ ಪವಾಡವನ್ನು ಕಂಡ ವೀರ ವಿಜ್ಞಾನಿಯಂತೆ ದಿಗ್ಭ್ರಾಂತಿಗೊಳಗಾಗಿ ಕನ್ಯೆ ಬೆಚ್ಚಿ ಬಿದ್ದಳು!

ಮತ್ತಾವ ಮಾಯೆಯಿಂ ಮಥಿಸಿದೌ ನಿದ್ರಾಸಮುದ್ರದಲಿ

ಓ ಸ್ವಪ್ನ ಸುಂದರಿಯೆ, ಮತ್ತೆ ಯಾವ ಮಾಯೆಯನ್ನು ಮಥಿಸಿದೆ ನಿದ್ರಾ ಸಮುದ್ರದಲ್ಲಿ? ಸೃಷ್ಟಿಸಲು ತೊಡಗಿದರೆ ನಿನ್ನ ಮಾಯಾಕುಂಚಕ್ಕೆ ಎದುರು ಯಾವುದು? ಸರಿಸಾಟಿ ಎಲ್ಲಿದೆ? ದೇವಾಲಯದ ಕಲ್ಲುನೆಲದಲ್ಲಿ ಮಲಗಿರುವ ಸುಂದರ ಸ್ತ್ರೀಯು ಅದೇಕೆ ಹೀಗೆ ನಡುಗುತ್ತಿದ್ದಾಳೆ? ಅವಳು ಏನನ್ನು ನೋಡುತ್ತಿದ್ದಾಳೆ? ತೋರಿಸು.

ಕನಕಮೃಗದ ಮರಿಯೆಲ್ಲಿ? ಗಿರಿ ಗುಹೆಗಳೆಲ್ಲಿ? ಕಾಡೆಲ್ಲಿ? ಪೊದೆಗಳೆಲ್ಲಿ? ಅವಳ ಮುಂದೆ ಸ್ವರ್ಗ, ವೈಕುಂಠ, ಕೈಲಾಸ ಲೋಕಗಳ ತಲೆಮೆಟ್ಟಿ ಗಹಗಹಿಸಿ ನಗುವ ಒಂದು ಆಹ್ಲಾದಕರ ದೃಶ್ಯ ಕಂಗೊಳಿಸುತ್ತಿದೆ! ಮೇಘಗಳಿಂದ ಆವರಿಸಿದ ಸುನೀಲ ಜಲದ ದೊಡ್ಡ ಅಲೆಗಳಿಂದ ಮಥಿಸಿ ಹೊಮ್ಮಿ ಬಂದ ಮುತ್ತಿನ ನೊರೆಗಳ ತಾಂಡವ ತರಂಗ ಅಟ್ಟಹಾಸ ಸಂಭ್ರಮದಿಂದ ಮತ್ತೇರಿದ ಸಮುದ್ರವು ಅನಂತ ವಿಸ್ತಾರದಲ್ಲಿ ಭವ್ಯವಾಗಿ ಗೋಚರಿಸುತ್ತಿದೆ!

ಗಗನ ದರ್ಪಣ ಒಡೆದು ಮುರಿದ ಒಂದುಭಾಗ ಭೂಮಿಗೆ ಇಳಿಯುತ್ತ ದ್ರವವಾಯಿತೊ? ಭೂದೇವಿಯ ಮಂದಹಾಸವೇ ನೀರಾಯಿತೊ? ಸಾಗರವೆ ಸಂಕ್ಷಿಪ್ತ ವೇಷದಲ್ಲಿ ಮೆರೆಯುತ್ತಿದೆಯೊ? ಎಂದು ಶೋಭಿಸುವ ಆ ಸ್ಫಟಿಕ ಸಲಿಲ ವಿಸ್ತೀರ್ಣದಲ್ಲಿ ಜಲದೇವಿಯ ಎದೆಯಲ್ಲಿ ಹೊಳೆಯುವ ಹಸಿರು ಮಣಿಯಂತೆ, ನೀಲ ಮಧ್ಯದಲ್ಲಿ ಕೆತ್ತಿದ ಒಂದು ಪಚ್ಚೆಯ ರೀತಿ – ನಗೆಯ ಮುಗುಳನ್ನು ಆಲಿಂಗಿಸಿರುವ ಹೃದಯವನ್ನು ಹೋಲುವ ದ್ವೀಪವೊಂದು ಕಂಡಿತು. ಅದು ದೃಷ್ಟಿಗೆ ಮನೋಹರವಾಗಿ ಉದ್ಯಾನ ನೌಕೆಯಂತೆ ತೇಲಿತು.

ಆ ದ್ವೀಪ ನಾವೆಯನ್ನು ಬಳಸಿ ಅದರ ಸುತ್ತಲೂ ದೊಡ್ಡ ಆಕಾರದ, ದೊಡ್ಡ ಎಸಳುಗಳ ಹೊನ್ನ ತಾವರೆಗಳ ಸಮೂಹವೂ ಅದನ್ನು ಸೇವಿಸುವ ಪರಿವಾರದಂತೆ ಕಣ್ಣಿಗೆ ಕಂಗೊಳಿಸಿತು. ಶರತ್ಕಾಲದ ಆಗಸ ರಂಗದಿಂದ ಇಳಿದು ಬಂದು ಭುವನ ಜೀವನ ಸುಖಕ್ಕೆ ಮನಸ್ಸು ಸೋತ ಬಿಳಿಯ ಮೋಡಗಳ ತುಂಡುಗಳೊ ಎಂಬಂತೆ ಕಾಣುತ್ತಿರುವ ಹಂಸಗಳು ಜಲಕ್ರೀಡೆಯ ಆಸಕ್ತಿಯಿಂದ ಅಲ್ಲಲ್ಲಿ ತೇಲಿ ರಂಜಿಸಿದವು!

ಅದು ದ್ವೀಪವೊ, ತೇಲುತ್ತಿರುವ ನಂದನವೊ ಎನ್ನುವಂತೆ ಪುಷ್ಪಗಳ ಸಮೂಹವು ಕೋಟಿ ವರ್ಣಗಳಿಂದ, ವಿವಿಧ ಪರಿಮಳಗಳಿಂದ – ಕಾಮನಬಿಲ್ಲನ್ನು ಬಿತ್ತಿ ಬೆಳೆ ತೆಗೆದಂತೆ ರಮಣೀಯವಾಗಿತ್ತು. ಅದು ತಂಗಾಳಿಗೆ ಅಲ್ಲೋಲಕಲ್ಲೋಲವಾಗಿ ಬಾಗಿ ತಲೆದೂಗುತ್ತಿತ್ತು.

ಆ ಎಲ್ಲ ಸೊಬಗಿಗೆ ಸಿರಿಮುಡಿಯಂತೆ ದೂರ ದಿಗಂತದ ಗಿರಿಯ ಶಿರದಲ್ಲಿ, ಆಹಾ! ಹೊಂಬಿಸಿಲಿನ ಎಳನೇಸರನು ಮೈದೋರಿದನು. ನೋಟ ಸ್ವರ್ಗಮಯವಾಯಿತು! ಮರಿಜಿಂಕೆ ಬಿರಿದು ಹೊಂಬೆಳಕಾಯಿತೆ? ಮದ್ದಿಡದ ಮಣ್ಣು ಕುಡಿಕೆ ಕಿಡಿ ತಗುಲಿ ಸಿಡಿಯಲು ರಾತ್ರಿಯ ಗಗನ ಮಂಡಲದಲ್ಲಿ ವರ್ಣಮಯ ನಕ್ಷತ್ರ ಮಳೆಗರೆಯಿತೆ? ಎಂದು ತರುಣಿಯು ಅಚ್ಚರಿಯ ಕಣ್ಣುಗಳಿಂದ, ಎವೆ ಬಡಿಯದೆ ನೋಡುತ್ತಿದ್ದಳು. ಹಾಗೆ ನೋಡುವಾಗ ಇನ್ನೊಂದು ಅದ್ಭುತವನ್ನು ಅಲ್ಲಿ ಕಂಡಳು.

## ಮೋಹನಾಕೃತಿಯ ಮಾನವಮೂರ್ತಿ

ತೇಲುವ ಆ ದ್ವೀಪ ಮಧ್ಯದ ಪುಷ್ಪರಂಗದಲ್ಲಿ ದೇವವಂದಿತ ಮೋಹನಾಕೃತಿಯ ಬಂಗಾರ ಬಣ್ಣದಲ್ಲಿ ಮಿಂದ ಮಾನವಮೂರ್ತಿಯನ್ನು ಕಂಡಳು. ಅವನಾರು?

ಕನ್ಯೆ ಅವನನ್ನು ಕಾಣುತ್ತ ಎರಕಹೊಯ್ದು ಮೂಡಿಸಿದಂತೆ, ಕುಂಚದ ವರ್ಣ ಕಲಾಕರ್ಮ ಚಿತ್ರಸ್ಥವಾದಂತೆ ನಿಶ್ಚಲವಾಗಿ ನಿಂತಳು. ಬಾಣ ಸಹಿತವಾಗಿ ಕೈಬಿಲ್ಲು ಜಾರಿ ನೆಲಕ್ಕೆ ಉರುಳಿತು. ಆ ಗಂಡೆದೆಯ ಹೃದಯದಲ್ಲಿ ತಾನು ಹೆಣ್ಣು ಎಂಬ ಲಜ್ಜೆಯ ಲಹರಿ ಮೊತ್ತಮೊದಲಿಗೆ ಸ್ಫುರಿಸಿತು. ಒಡನೊಡನೆ ಸೌಂದರ್ಯದ ಬಾಯಾರಿಕೆಯಿಂದ ಕೋಮಲತೆ ಕುಡಿಯೊಡೆಯಿತು.